ಮೈಸೂರ ಗಿಜಿಟ.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 13, ಸ್ 1890.

☞ ಈ ಭಾಗವನ್ನು ಪ್ರತ್ಯೇಕ ಕೀಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೆಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಳು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇಸ್ತಿಹಾರ್ ನಾಮೆ.

ಫಾರೆಸ್ಟ್ ಇಲಾಖೆ.

ತಾರೀಖು 29ನೇ ಸೆಪ್ಟಂಬರ್ 1890.

ನಂ. 9.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ಪುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗ ಡಿಸ್ಟ್ರಿಕ್ಟ್ ಶಿಕಾರಿಪುರದ ಕೋಠಿ		—14ನೇ ನವಂಬರ್ 1890	-ಹೆಚ್ಚು ಕಡಮೆ 250 ಟ್ಯಗಳು.
ಶಿವಮೊಗ್ಗ	..	ಡಿಟೋ—17ನೇ, ಡಿಟೋ	450 ಡಿಟೋ
ತೀರ್ಥಹಳ್ಳಿ	..	ಡಿಟೋ—22ನೇ ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು		ಡಿಟೋ—28ನೇ ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟ್ ಹಾಸನ		ಡಿಟೋ— 4ನೇ ಡಿಶಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟ್ ಶ್ರೀರಂಗಪಟ್ಟಣ		ಡಿಟೋ—10ನೇ ಡಿಟೋ	350 ಡಿಟೋ
ಹುಣಸೂರು ಡಿಟೋ		ಡಿಟೋ—15ನೇ ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟ್		ಡಿಟೋ—20ನೇ ಡಿಟೋ	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮಕ್ಕುಂಗಳ 34, 35ನೇ ನಂಬರ್ ಗೆಜೆಟ್ಗಳಲ್ಲಿ ಪಾಯಿಷ್ ಮಾಡಲ್ಪಟ್ಟ ಇಸ್ತಿಹಾರ್ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್ಗಳು ಹರಾಜ್ ಕಾಲದಲ್ಲಿ ಪೋದ ಲ್ಪಡುವವು.

ಎಲ್. ರಿಕೆಟ್ಸ್,
ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್.

ನಂದೀದುರ್ಗ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್ಯವರ ಕೋರ್ಟ್ನಿಂದ.

1890ನೇ ಇಸವಿ ಅರ್ಜೀ ನಂಬರ್ 169.

ಮೃತಪಟ್ಟ ಬಾಲಯ್ಯದೇವರನ ಆಸ್ತೀ ವಿಷಯದಲ್ಲಿ—

ಅರ್ಜೀದಾರರಾದ ಪೆದ್ದ ವೆಂಕಟೇಶದೇವರು (1,) ಡಿ ಬಾಲಮ್ಮ (2,) ಮೃತಪಟ್ಟ ಸದರೀ ಬಾಲಯ್ಯ ದೇವರಿಗೆ ಮಗ, ಹೆಂಡತಿ ಆಗಬೇಕೆಂಬ. ಹಕ್ಕುದಾರಿ ಮೇಲೆ ಸ್ಥಳದ ವೆಂಕಟೇಶದೇವರು 1 ಬಾಲಮ್ಮ 2 ಮದರಾಸ್ ವಾಸಸ್ಥನಾಗಿ ಮೃತಪಟ್ಟ ಬಾಲಯ್ಯದೇವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ನ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟೇಶಪ್ಪೇವರು, ಬಾಲಮ್ಮನ ಅರ್ಜಿಯನ್ನ 1890ನೇ ಇಸವಿ ಡಿಶಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ರೆಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಾಲಯ್ಯದೇವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಪ್ಪೆ.

1890ನೇ ಇಸವಿ ಡಿಶಂಬರ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1890ನೇ ಇಸವಿ ಅರ್ಜೀ ನಂಬರ್ 180.

ಬೆಂಗಳೂರು ಜೋರೀ ಪೇಟೇಲಿ ಇದ್ದು ಮೃತಪಟ್ಟ ಕೊಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಮುತಮ್ಮ, ಮೃತಪಟ್ಟ ಸದರೀ ಕೊಂಡಪ್ಪನಿಗೆ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಜೋರೀಪೇಟೆಯ ಸ್ಥಳದ ಮುತ್ತಮ್ಮನು ಬೆಂಗಳೂರು ಜೋರೀಪೇಟೆಯ ವಾಸಸ್ಥರಾಗಿ ಮೃತಪಟ್ಟ ಕೊಂಡಪ್ಪನ ಜಿಂಚಿಗಿ ಗ್ಯಾಗೀ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮುತ್ತಮ್ಮನ ಅರ್ಜಿಯನ್ನು 1891ನೇ ಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೊಂಡಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಪ್ಪೆ.

1890ನೇ ಇಸವಿ ಡಿಶಂಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಇಸ್ತಿಹಾರ್‌ನಾಮಾ.

ತಾರೀಖು 26—11—90.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಕ್ಯೋಸ್‌ಪೇಟೆ ತಾಲ್ಲೂಕು ಸ್ಟೇಟ್ ಫಾರೆಸ್ಟಿನ ಹುಣಸೆ, ಹೊಂಗೆ, ಬೀಗೆ 1890—91ನೇ ಸಾಲಿನ ಫಸಲ್ ಕ್ಯೋಸ್‌ಪೇಟೆ ತಾಲ್ಲೂಕು ಆಮಿಲರಿಂದ ಈ ಕೆಳಗೆ ನಮೂದಾಗುವ ಸ್ಥಳ ಮತ್ತು ತಾರೀಖುಗಳಲ್ಲಿ ಹರಾಜು ಮಾಡಲ್ಪಡುತ್ತೆ.

ಫಾರೆಸ್ಟು ಹೆಸರು.	ಹರಾಜು ತಾರೀಖು,	ಯಾವ ಸ್ಥಳದಲ್ಲಿ ಹರಾಜು.
1 ಕುಂಬಳಗೋಡು ..	5ನೇ ಜನವರಿ 1891	ಬಿಡದಿ
2 ಹುಲತ್ತಾರ ..	ಡಿಟೋ	ಡಿಟೋ
3 ಆಚ್ಚಲ್	6 ಮತ್ತು 7ನೇ ಡಿಟೋ	ಕ್ಯೋಸ್‌ಪೇಟೆ
4 ಮಣುಗುಡ್ಡಿ		
5 ಹಂದಿಗೊಂದಿ		
6 ಮಾಕಳಿ		
7 ತೆಂಗ್ನಕಲ್ಲು ..	8ನೇ ಡಿಟೋ	ಚನ್ನಪಟ್ಟಣ

ಹರಾಜಿನ ಪರತ್ತುಗಳು—ಈ ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

ಸಿ. ನಾರಾಯಣರಾವ್,
ಅಸಿಸ್ಟೆಂಟೆ ಕ್ಯಸರ್‌ವೇಟರ್ ಆಫ್ ಫಾರೆಸ್ಟ್ಸ್.

ಬೆಂಳೂರು ಡಿಸ್ಟ್ರಿಕ್ಟು.

ತಾರೀಖು 20ನೇ ನವಂಬರ್ 1890.

ನಂ. 1. ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲಿ ಬಹಿರಂಗವಾದೆ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡೆ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರು ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಜಮಾನ್ಯರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.